ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 814
ಸದಸ್ಯರ ಹೆಸರು : ಶ್ರೀ ವೆಂಕಟರೆಡ್ಡಿ ಮುದ್ನಾಳ್(ಯಾದಗಿರಿ)
ಉತ್ತರಿಸುವ ದಿನಾಂಕ : 12-02-2019
ಉತ್ತರಿಸುವ ಸಚಿವರು : ಮುಖ್ಯಮಂತ್ರಿಯವರು.

	ಪ್ರಶ್ನೆ	ಉತ್ತರ
(ಅ)	ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ವಡಗೇರಾ, ಹೈಯ್ಯಾಳ ಹಾಗೂ ದೊರನಹಳ್ಳಿ ಗ್ರಾಮಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳು ಪದವಿ ಪೂರ್ವ ಕಾಲೇಜಿಗೆ ಹೋಗಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಬಂದಿದೆ
(ಆ)	ಬಂದಿದ್ದಲ್ಲಿ, ಈ ಭಾಗದಲ್ಲಿ ಪದವಿ ಪೂರ್ವ ಕಾಲೇಜು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;	ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅಗತ್ಯತೆ ಇರುವ ರಾಜ್ಯದ 362 ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಸರ್ಕಾರಿ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ, ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡುವ ಕ್ರೋಢೀಕೃತ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಸದರಿ ಕ್ರೋಢೀಕೃತ ಪ್ರಸ್ತಾವನೆಯಲ್ಲಿ ಯಾದಗಿರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ದೊರನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಪ್ರೌಢ ಶಾಲೆಯನ್ನು ಸರ್ಕಾರಿ ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಪ್ರಸ್ತಾವನೆಯು ಸೇರಿರುತ್ತದೆ. ಸದರಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ವಡಗೇರಾ ಮತ್ತು ಹೈಯಾಳ ಗ್ರಾಮದಲ್ಲಿನ ಪ್ರೌಢ ಶಾಲೆಗಳನ್ನು ಉನ್ನತೀಕರಿಸಿ, ಪದವಿ ಪೂರ್ವ ಕಾಲೇಜನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ಹಂತದಲ್ಲಿ ಪರಿಶೀಲನೆಯಲ್ಲಿದೆ.
(ಇ)	ಇದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳಾವುವು?	

ಸಂಖ್ಯೆ: ಇಡಿ 30 ಡಿಜಿಡಬ್ಲ್ಯೂ 2019

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

(2)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 323
ಸದಸ್ಯರ ಹೆಸರು	: ಶ್ರೀ. ಕುಮಾರ ಬಂಗಾರಪ್ಪ. ಎಸ್ (ಸೊರಬ)
ಉತ್ತರಿಸುವ ಸಚಿವರು	: ಮಾನ್ಯ ಸಣ್ಣ ಕೈಗಾರಿಕಾ ಸಚಿವರು.
ಉತ್ತರಿಸುವ ದಿನಾಂಕ	: 12/02/2019

ಕ್ರ ಸಂ	ಪ್ರಶ್ನೆ	ಉತ್ತರ	Answer
ತ)	ಸೊರಬ ವಿಧಾನಸಭಾ ಕ್ಷೇತ್ರವು ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿದ್ದು, ಕಳೆದ 4 ವರ್ಷಗಳಿಂದ ಭೀಕರ ಬರಗಾಲವನ್ನು ಅನುಭವಿಸುತ್ತಿದ್ದು, ಯುವ ಜನಾಂಗಕ್ಕೆ ಅನುಕೂಲವಾಗಲು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಯುವ ಜನಾಂಗಕ್ಕೆ ಅನುಕೂಲವಾಗಲು ಸಣ್ಣ ಕೈಗಾರಿಕೆಗಳನ್ನು ಸೊರಬ ವಿಧಾನ ಸಭಾ ಕ್ಷೇತ್ರದಲ್ಲಿ ಸ್ಥಾಪಿಸುವ ಪ್ರಸ್ತಾವನೆ ಪ್ರಗತಿಯಲ್ಲಿರುತ್ತದೆ. ಸೊರಬ ತಾಲ್ಲೂಕಿನ ಹಿರೇಶಕುನ ಗ್ರಾಮದ ಸರ್ವೆ.ಸಂ: 151 ರಲ್ಲಿ 20 ಎಕರೆ ಸರ್ಕಾರಿ ಜಮೀನು ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಕೆ.ಎಸ್.ಎಸ್.ಐ.ಡಿ.ಸಿಗೆ ಹಂಚಿಕೆಯಾಗಿದ್ದು, ಸದರಿ ಭೂಮಿಯನ್ನು ಸ್ವಾಧೀನಕ್ಕೆ ಪಡೆಯಲಾಗಿದೆ. ಹೊಸ ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ರೂ.606.00ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಸಿವಿಲ್ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು, ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇದಕ್ಕಾಗಿ 2016-17 ಮತ್ತು 2017-18 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.275.00 ಲಕ್ಷ ಅನುದಾನವನ್ನು ಒದಗಿಸಲಾಗಿದೆ. ಸದರಿ ಕೈಗಾರಿಕಾ ವಸಾಹತುವಿನಲ್ಲಿ ವಿವಿಧ ಅಳತೆಯ 65 ಕೈಗಾರಿಕಾ ನಿವೇಶನಗಳ ಅಭಿವೃದ್ಧಿ ಪಡಿಸಿ ಈಗಾಗಲೇ 13.02.2018 ರಂದು ಪ್ರಕಟಣೆ ನೀಡಿದ್ದು, ಅರ್ಜಿ ಸಲ್ಲಿಸಲು 16.08.2018 ರ ತನಕ ಕಾಲಾವಕಾಶ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಎದುರಾಗಿ 44 ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ. ಹಂಚಿಕೆ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಡಾ. ನಂಜುಂಡಪ್ಪ ವರದಿ ಪ್ರಕಾರ ಹಿಂದುಳಿದ ತಾಲ್ಲೂಕು ಪ್ರದೇಶವೆಂದು ಗುರುತಿಸಿದ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾಮಗಾರಿ ವೆಚ್ಚದ ಶೇ.50% ರಷ್ಟು ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡುವುದರಿಂದ ರಿಯಾಯಿತಿ ದರದಲ್ಲಿ ನಿವೇಶನಗಳ ಮಾರಾಟ ದರ ನಿಗಧಿಪಡಿಸಲಾಗುವುದು.	The proposal of setting up small industries in Soraba to assist the youth is in progress. Government has Granted 20 Acres Land to KSSIDC for Establishing the New Industrial Estate in survey no.151 of Hireshakuna, Soraba and possession of the land has been taken over by KSSIDC and development works have been undertaken at a cost of Rs.606.00 lakhs Civil Works are about to be Completed and electrification work is in process. During 2016-17 and 2017-18 an amount of Rs.275.00 lakhs have been released by Government to KSSIDC under Special Development Plan for development of Industrial Estate at Hireshakuna. 65 No's of different sizes of Industrial Plots are developed and notification has been issued for Allotment on 13.02.2018 and last date for submission of Application was on 16.08.2018. 44 No's Applications have been received against Notification. The allotment of plots is in Process. Soraba Taluk has been declared as most backward taluk as per Dr. Nanjundappa Report. Hence Govt has released 50% of development Cost to KSSIDC which will help to allot the land at subsidized rate.

ಆ)	ಹಾಗಿದ್ದಲ್ಲಿ, ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಯುವಕರನ್ನು ಆಕರ್ಷಿಸುವ ಕಾರ್ಯತಂತ್ರ ರೂಪಿಸಿಕೊಳ್ಳಲಾಗಿದೆಯೇ;	1. ಯುವ ಜನತೆಯನ್ನು ಆಕರ್ಷಿಸಲು ತಾಲ್ಲೂಕು / ಹೋಬಳಿ ಮಟ್ಟದಲ್ಲಿ ಉದ್ಯಮಶೀಲತಾ ಪ್ರೇರಣಾ ಶಿಬಿರಗಳನ್ನು ನಡೆಸಲಾಗುವುದು. 2. ಸಣ್ಣ ಕೈಗಾರಿಕೆಗಳು ಕೆ.ಎಸ್.ಎಫ್.ಸಿ ಮೂಲಕ ಪಡೆಯುವ ಅವಧಿ ಸಾಲದ ಮೇಲೆ ಶೇ.10 ರಷ್ಟು ಬಡ್ಡಿ ಸಹಾಯಧನ ನೀಡಲಾಗುತ್ತದೆ. 3. ಕೈಗಾರಿಕಾ ವಸಾಹತುವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಸ್ಥಾಪಿಸುವ ನಿವೇಶನಗಳನ್ನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು. 4. ಪರಿಶಿಷ್ಟ ಜಾತಿ/ಪಂಗಡದ ಯುವಜನ /ಅಭ್ಯರ್ಥಿಗಳಿಗೆ ನಿಗಮದಿಂದ ಶೇ.50 ರಷ್ಟು ದರದಲ್ಲಿ ನಿವೇಶನ ಹಂಚಿಕೆ ಮಾಡಲಾಗುವುದು. 5. ಸರ್ಕಾರದ ಯೋಜನೆಯಂತೆ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ 4 'ಸಿ' ಮಾದರಿ ಹಾಗೂ 4 'ಡಿ' ಮಾದರಿ ಮಳಿಗೆಗಳನ್ನು ನಿರ್ಮಿಸಲಾಗುತ್ತಿದ್ದು, ವಿಶೇಷ ರಿಯಾಯಿತಿ ಯೋಜನೆಯಲ್ಲಿ ಹಂಚಿಕೆ ಮಾಡಲಾಗುವುದು. 6. ಸರ್ಕಾರದ ನಿಯಮದಂತೆ ಬಂಡವಾಳ ಹೂಡಿಕೆಯಲ್ಲ ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಶೇ.25 ಹಾಗೂ ಸಣ್ಣ ಕೈಗಾರಿಕೆಗಳಿಗೆ ಶೇ.20 ರಷ್ಟು ಸಹಾಯ ಧನ ನೀಡಲಾಗುವುದು.	1. To attract the youths, entrepreneurship Awareness Camps are conducted in Taluk/Hobli level. 2. 10% Interest subsidy on term loan availed by small industries through K.S.F.C is given. 3. Steps will be taken for Allotment of plots after developing the industrial estate completely. 4. 50 % Subsidy on Cost of the plot will be extended to SC/ST Entrepreneurs. 5. 4 'D' Type & 4 'C' Type Sheds are constructed and same will be allotted to SC/ST Entrepreneurs at concessional rate. 6. 25 % Subsidy is offered to micro industries and 20 % subsidy is offered to Small industries on Capital Investment.
ಇ)	ಅತ್ಯಮೂಲ್ಯವಾದ ಕೈಗಾರಿಕಾ ಪ್ರದೇಶದಲ್ಲಿ ಕಛೇರಿ ನಡೆಸಲು ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ;	ಇಲಾಖೆಗೆ ಸೊರಬ ಕೇಂದ್ರ ಸ್ಥಾನದಲ್ಲಿ ಸ್ವಂತ ಕಟ್ಟಡ ಇಲ್ಲದಿರುವುದರಿಂದ ತಾಲ್ಲೂಕು ಮಟ್ಟದ ಕೈಗಾರಿಕಾ ವಿಸ್ತರಣಾಧಿಕಾರಿಯ ಕಛೇರಿಯು ಹಳೇ ಪೊಲೀಸ್ ಸ್ಟೇಷನ್ ಹತ್ತಿರ, ಹಳೇ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿದೆ.	Department of Industries and Commerce does not have its own building. Hence, Office of the Taluk level Industrial Extension Officer has been established at Old Taluk Office Near Old Police Station.
ಈ)	ಕೈಗಾರಿಕಾ ಅಧಿಕಾರಿಗಳು, ಕೈಗಾರಿಕಾ ಪ್ರದೇಶದಲ್ಲಿದ್ದ ಉತ್ತಮ ಗುಣಮಟ್ಟದ ಗ್ರಾನೈಟನ್ನು ಸಾಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸೊರಬ ಕೈಗಾರಿಕಾ ವಸಾಹತುವಿನಲ್ಲಿ ಗ್ರಾನೈಟ್ ಲಭ್ಯವಿರುವುದಿಲ್ಲ, ಇತ್ತೀಚೆಗೆ ಅನಾಮಿಕರು ಅನಧಿಕೃತವಾಗಿ ಕೈಗಾರಿಕಾ ವಸಾಹತುವಿನ ಒಂದು ಭಾಗದಲ್ಲಿ ಮಣ್ಣನ್ನು ಅಗೆದು ಸಾಗಿಸಿರುವುದು ಕಂಡುಬಂದಿದ್ದು, ಕೂಡಲೇ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಗಸ್ತು ತಿರುಗಲು ಕೋರಲಾಗಿದೆ. ಮುಂದಿನ ದಿನಗಳಲ್ಲಿ ಪ್ರಕರಣ ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗುವುದು. (ಪ್ರತಿ ಲಗತ್ತಿಸಿದೆ)	Granite is not available in industrial estate. It has come to the notice of KSSIDC that recently some persons have excavated the gravel and action has been taken to stop the excavation of gravel. A complaint has been lodged in local Police station and requested police to conduct rounds. **(Copy enclosed)**

ಉ) ಹಾಗಿದ್ದಲ್ಲಿ, ಕೈಗಾರಿಕೆಯಲ್ಲಿ ಹಿಂದುಳಿದ ಈ ತಾಲ್ಲೂಕನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ?

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಸರ್ಕಾರದ ಕೈಗಾರಿಕಾ ನೀತಿ 2014-19ರ ಅನ್ವಯ ಅತೀ ಹಿಂದುಳಿದ ತಾಲ್ಲೂಕು ಎಂಬ ಆಧಾರದ ಮೇಲೆ ವಲಯ-1 ಎಂದು ವರ್ಗೀಕರಿಸಲಾಗಿದ್ದು, ಹೊಸದಾಗಿ ಸ್ಥಾಪಿಸುವ ಹಾಗೂ ವಿಸ್ತರಣೆ, ಆಧುನೀಕರಣ ಹಾಗೂ ವೈವಿಧ್ಯೀಕರಣದಲ್ಲಿ ತೊಡಗುವ ಕೈಗಾರಿಕೆ ಘಟಕಗಳಿಗೆ ಈ ಕೆಳಕಂಡಂತೆ ಸ್ಥಿರ ಬಂಡವಾಳ ಹೂಡಿಕೆ ಮೇಲೆ ಸಹಾಯಧನ ಪಡೆಯಲು ಅವಕಾಶವಿರುತ್ತದೆ.

(ರೂ.ಲಕ್ಷ)

ವರ್ಗ	ಇತರೇ	ಪ.ಜಾತಿ/ ಪ.ವರ್ಗ	ಮಹಿಳೆ	ಪ.ಜಾತಿ/ ಪ.ವರ್ಗದ ಮಹಿಳೆಯವರಿಗೆ	ಅಲ್ಪಸಂಖ್ಯಾತ, ಹಿಂ.ವರ್ಗ-ಪ್ರವರ್ಗ-1 &2, ವಿಕಲಚೇತನ ಮತ್ತು ಮಾಜಿಸೈನಿಕ
ಅತಿ ಸಣ್ಣ ಕೈಗಾರಿಕೆ	ಶೇ.25 ಗರಿಷ್ಠ 15.00	ಶೇ. 30 ಗರಿಷ್ಠ 18.00	ಶೇ.30 ಗರಿಷ್ಠ 18.00	ಶೇ 35 ಗರಿಷ್ಠ 20.00	ಶೇ 30 ಗರಿಷ್ಠ 17.00
ಸಣ್ಣ ಕೈಗಾರಿಕೆ	ಶೇ.20 ಗರಿಷ್ಠ 40.00	ಶೇ.25 ಗರಿಷ್ಠ 45.00	ಶೇ.25 ಗರಿಷ್ಠ 45.00	ಶೇ.30 ಗರಿಷ್ಠ 50.00	ಶೇ 25 ಗರಿಷ್ಠ 45.00
ಮಧ್ಯಮ ಕೈಗಾರಿಕೆ	ಗರಿಷ್ಠ 50.00	ಗರಿಷ್ಠ 55.00	ಗರಿಷ್ಠ 55.00	ಗರಿಷ್ಠ 60.00	ಗರಿಷ್ಠ 55.00

ಕರ್ನಾಟಕ ಕೃಷಿ ವಾಣಿಜ್ಯ ಮತ್ತು ಆಹಾರ ಸಂಸ್ಕರಣಾ ನೀತಿ-2015 ರನ್ವಯ ಸ್ಥಾಪಿಸುವ ಕೃಷಿ ಮತ್ತು ಆಹಾರ ಸಂಸ್ಕರಣಾ ಘಟಕಗಳಿಗೆ ಶೇ35 ರಷ್ಟು (ಗರಿಷ್ಠ ರೂ.65 ಲಕ್ಷ) ಸ್ಥಿರ ಬಂಡವಾಳ ಹೂಡಿಕೆ ಸಹಾಯಧನ ಪಡೆಯುವ ಅವಕಾಶವಿರುತ್ತದೆ.

ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ಕೈಗಾರಿಕಾ ನೀತಿ 2014-19 ರಡಿಯಲ್ಲಿ ಈ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಆಕರ್ಷಿಸಲು ಈ ಕೆಳಗಿನ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ನೀಡಲಾಗುತ್ತಿದೆ.

1. ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿ.
2. ಬಂಡವಾಳ ಹೂಡಿಕೆ ಸಹಾಯಧನ
3. ಬಡ್ಡಿ ಸಹಾಯಧನ

Soraba taluk of Shivamogga district has been classified as Zone-1 (Most Backward Taluk) as per New Industrial Policy 2014-19 and following incentives and concessions are offered to units undertaking New, Expansion, Modernization and Diversification.

(Rs. Lakhs)

Category of MSME	Others	SC/ ST	Women	SC/ST-Women	Minority, PH, EX-smen, OBC (1 & 2)
Micro	25% Max 15.00	30% Max 18.00	30% Max 18.00	35% Max 20.00	30% Max 17.00
Small	20% Max 40.00	25% Max 45.00	25% Max 45.00	30% Max 50.00	25% Max 45.00
Medium	Max 50.00	Max 55.00	Max 55.00	Max 60.00	Max 55.00

As per the Karnataka Agri and Food Processing Policy 2015 investment subsidy of 35% Max. 65 lakhs is being offered for establishing agro and food processing industries.

Under Karnataka Industrial Policy 2014-19 the following incentives and concessions are being offered under this policy.

1. Stamp duty registration and Registration fee concession.
2. Investment subsidy
3. Interest subsidy

		4. ಭೂ ಪರಿವರ್ತನಾ ಶುಲ್ಕ ಮರುಪಾವತಿ. 5. ಪ್ರವೇಶ ತೆರಿಗೆ ವಿನಾಯಿತಿ. 6. ರಫ್ತು ಆದಾರಿತ ಘಟಕಗಳಿಗೆ ರಿಯಾಯಿತಿ. 7. ಕೃಷಿ ಉತ್ಪನ್ನ ಮಾರುಕಟ್ಟೆ ತೆರಿಗೆಯಿಂದ ವಿನಾಯಿತಿ. 8. ತ್ಯಾಜ್ಯ ಸಂಸ್ಕರಣಾ ಯಂತ್ರ ಸ್ಥಾಪನೆಗೆ ಸಹಾಯಧನ. 9. ವಿದ್ಯುತ್ ತೆರಿಗೆ ವಿನಾಯಿತಿ 10. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಮತ್ತು ಪೇಟೆಂಟ್ ನೋಂದಣಿ ಸಹಾಯಧನ 11. ಮಳೆ ನೀರು ಕೊಯ್ಲು / ಸಂರಕ್ಷಣೆ ಸಹಾಯಧನ 12. ಶಕ್ತಿ ಸಂರಕ್ಷಣೆ ಸಹಾಯಧನ 13. ಯೋಜನಾ ವರದಿ ತಯಾರಿಕಾ ವೆಚ್ಚ ಮರುಪಾವತಿ	4. Reimbursement of NA conversion fee 5. Entry tax exemption. 6. Incentives to Export oriented units. 7. APMC cess exemption 8. Effluent treatment plant subsidy 9. Power tax exemption 10. Technology up gradation, quality certification and patent registration subsidy. 11. Rain Water harvesting / conservation subsidy 12. Energy conservation subsidy 13. Project report cost reimbursement

ಸಿಐ 13 ಸಪ್ರಕೈ 2019

(ಎಸ್. ಆರ್. ಶ್ರೀನಿವಾಸ್(ವಾಸು))
ಸಣ್ಣ ಕೈಗಾರಿಕೆ ಸಚಿವರು

ಕರಾಸಕೈಅನಿನಿ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೋಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.
ಫೋನ್ : 080-2340 7011 ರಿಂದ 25. ಫ್ಯಾಕ್ಸ್ : 91-080-2314 3566 / 2335 9070 ತಂತಿ : ಸ್ಮಾಲ್ ಕಾರ್ಪ್
ವಿಭಾಗೀಯ ಕಛೇರಿ ಕೈಗಾರಿಕಾ ವಸಾಹತು, ಮಾಚೇನಹಳ್ಳಿ, ಶಿವಮೊಗ್ಗ 08182-250607 Email :kssidcsmg@yhoo.in

ಕೈವ ಶಿವ: ಸೊರಬ :ಅನಧಿಕೃತ ಮಣ್ಣು ಸಾಗಣೆ 2018-19

ಶಿವಮೊಗ್ಗ
ದಿನಾಂಕ :24.12.2018.

ಗೆ,
ಪೋಲಿಸ್ ಇನ್ಸ್‌ಪೆಕ್ಟರ್
ಸೊರಬ,
ಸೊರಬ ತಾಲ್ಲೂಕು

ಮಾನ್ಯರೆ

ವಿಷಯ: ಕೈಗಾರಿಕಾ ವಸಾಹತು, ಹಿರೇಶಕುನ ಗ್ರಾಮ, ಸೊರಬ ತಾಲ್ಲೂಕು ಇಲ್ಲಿ ಅನಧಿಕೃತ ಮಣ್ಣು ಸಾಗಣೆ ಬಗ್ಗೆ

****

ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾಗಿರುವ ಕೆ.ಎಸ್.ಎಸ್.ಐ.ಡಿ.ಸಿಯಿಂದ ಕೈಗಾರಿಕಾ ಬೆಳವಣಿಗೆಯಲ್ಲಿ ಹಿಂದುಳಿದಿರುವ ಸೊರಬ ತಾಲ್ಲೂಕಿನಲ್ಲಿ ಕೈಗಾರಿಕೆಗಳನ್ನು ಆರಂಭಿಸುವ ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಸರ್ಕಾರದಿಂದ ಮಂಜೂರಾಗಿರುವ ಸೊರಬ ತಾಲ್ಲೂಕು ಹಿರೇಶಕುನ ಗ್ರಾಮದಲ್ಲಿ ಸರ್ವೆ ನಂ-119 ರಲ್ಲಿ 20-00 ಎಕರೆ ಜಮೀನಿನಲ್ಲಿ ಕೈಗಾರಿಕಾ ಕೈಗಾರಿಕಾ ವಸಾಹತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಸದರಿ ಕೈಗಾರಿಕಾ ವಸಾಹತುವಿಗೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು ಕಾಮಗಾರಿಗಳ ಸಾಮಗ್ರಿಗಳು ಕಳ್ಳತನವಾಗುತ್ತಿದ್ದು ಇವರ ಬಗ್ಗೆ ಗುತ್ತಿಗೆದಾರರು ಈ ಬಗ್ಗೆ ಈಗಾಗಲೇ ದೂರು ನೀಡಲಾಗಿತ್ತು. ಆ ಸಮಯದಲ್ಲಿ ತಮ್ಮ ಇಲಾಖೆಯಿಂದ ಗಸ್ತು ನಿಯೋಜಿಸಲಾಗಿತ್ತು. ಇದರಿಂದ ಕಿಡಿಗೇಡಿಗಳು ಬರುವುದು ಹಾಗೂ ಸಣ್ಣ ಪಟ್ಟ ಕಳ್ಳತನಗಳು ಆಗುತ್ತಿರುವುದು ಕಡಿಮೆ ಆಗಿತ್ತು ಆದರೆ ಇತ್ತೀಚಿಗೆ ಪುನ: ನಿಗಮಕ್ಕೆ ಸೇರಿದ ಜಾಗದಲ್ಲಿರುವ ಮಣ್ಣನ್ನು ಅನಧಿಕೃತವಾಗಿ ರಾತ್ರಿ ವೇಳೆಯಲ್ಲಿ ಕಳ್ಳತನ ಮಾಡಿ ಸಾಗಿಸುತ್ತಿರುವುದು ಕಂಡು ಬಂದಿರುತ್ತದೆ. ಇದರಿಂದ ಬಗ್ಗೆ ಗುತ್ತಿಗೆದಾರರ ಪ್ರತಿನಿಧಿಗಳು ಹಾಗೂ ಮಾನ್ಯ ಶಾಸಕರು ಸೊರಬ ಇವರ ಆಪ್ತ ಸಹಾಯಕರು ಸಹ ಅನಧಿಕೃತವಾಗಿ ಮಣ್ಣು ಸಾಗಣೆಯಾಗುತ್ತಿರುವ ಬಗ್ಗೆ ತಿಳಿಸಿ ಇದರ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಕೈಗಾರಿಕಾ ವಸಾಹತುವಿನಲ್ಲಿ ಆಗುತ್ತಿರುವ ಮಣ್ಣು ಸಾಗಣೆ ಹಾಗೂ ಕಳ್ಳತವನ್ನು ತಡೆಗಟ್ಟಲು ಅನುಕೂಲವಾಗುವಂತೆ ಈ ಹಿಂದೆ ನಿಯೋಜಿಸಿದಂತೆ ಗಸ್ತು ವ್ಯವಸ್ಥೆಯನ್ನು ಮಾಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ
ಸಹಿ
ಸಹಾಯಕ ಪ್ರಧಾನ ವ್ಯವಸ್ಥಾಪಕರು-ಪ್ರ
ಶಿವಮೊಗ್ಗ ವಿಭಾಗ ಶಿವಮೊಗ್ಗ

ಪ್ರತಿಯನ್ನು: ಉಪ ಆರಕ್ಷಕ ರಕ್ಷಣಾಧಿಕಾರಿಗಳು, ಶಿಕಾರಿಪುರ ತಾ. ಶಿವಮೊಗ್ಗ ಜಿಲ್ಲೆ. ರವರ ಮಾಹಿತಿಗಾಗಿ.

ಸಹಾಯಕ ಪ್ರಧಾನ ವ್ಯವಸ್ಥಾಪಕರು-ಪ್ರ
ಶಿವಮೊಗ್ಗ ವಿಭಾಗ ಶಿವಮೊಗ್ಗ

Received
ಠಾಣಾಧಿಕಾರಿ
ಸೊರಬ ಪೋಲೀಸ್ ಠಾಣೆ
ಸೊರಬ

o/c

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:	208
ಸದಸ್ಯರ ಹೆಸರು :	ಶ್ರೀ ಸೋಮಣ್ಣ (ಗೋವಿಂದರಾಜನಗರ)
ಉತ್ತರಿಸಬೇಕಾದ ದಿನಾಂಕ:	12.02.2019.
ಉತ್ತರಿಸುವ ಸಚಿವರು :	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಅಧಿಕೃತವಾಗಿ ನಡೆಯುತ್ತಿರುವ ಜಲ್ಲಿ, ಎಂ-ಸ್ಯಾಂಡ್ ಸೇರಿದಂತೆ ಇರುವ ಬಂಡೆ ಗಣಿಗಾರಿಕೆಗಳು ಎಷ್ಟು;	ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಿರುವ ವಿವರಗಳು ಕೆಳಕಂಡಂತಿವೆ:

ಜಿಲ್ಲೆ	ಅಲಂಕಾರಿಕ ಶಿಲೆ ಕಲ್ಲುಗಣಿ ಗುತ್ತಿಗೆಗಳ ಸಂಖ್ಯೆ	ವಿಸ್ತೀರ್ಣ (ಎಕರೆ/ ಗುಂಟೆ)	ಕಟ್ಟಡ ಕಲ್ಲುಗಣಿ ಮತ್ತು ಎಂ-ಸ್ಯಾಂಡ್ ಗುತ್ತಿಗೆಗಳ ಸಂಖ್ಯೆ	ವಿಸ್ತೀರ್ಣ (ಎಕರೆ/ಗುಂಟೆ)
ರಾಮನಗರ	59	368.09	69	369.35
ತುಮಕೂರು	28	156.36	137	601.28
ಚಾಮರಾಜನಗರ	43	196.10	37	79.32
ಮಂಡ್ಯ	2	12.00	135	284.09
ಮೈಸೂರು	4	11.32	17	31.22
ಒಟ್ಟು	**136**	**745.07**	**395**	**1365.26**

ಕ್ರ.ಸಂ.	ಪ್ರಶ್ನೆ	ಉತ್ತರ
ಆ	ಗಣಿಗಾರಿಕೆ ನಡೆಸಲು ಯಾವ ಯಾವ ಇಲಾಖೆಗಳಿಂದ ಅನುಮತಿ ಪಡೆದಿರಬೇಕು; ಈ ರೀತಿ ಅನುಮತಿ ಪಡೆದು ನಡೆಸುತ್ತಿರುವ ಗಣಿಗಾರಿಕೆಗಳು ಎಷ್ಟು; ಅನಧಿಕೃತ ಗಣಿಗಾರಿಕೆಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(5)ರಂತೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ತಾಂತ್ರಿಕ ವರದಿ ಪಡೆದು ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಲಾಗುತ್ತದೆ. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(1-A)ರಂತೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿದಾರರು ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದಿಂದ ಪರಿಸರ ಅನುಮತಿ ಪತ್ರ ಸಲ್ಲಿಸಿದ ನಂತರ ಗುತ್ತಿಗೆ ಕರಾರು ಅಮಲ್ಜಾರಿ ಮಾಡಲಾಗುತ್ತದೆ. ಮೇಲೆ ತಿಳಿಸಿರುವ ಜಿಲ್ಲೆಗಳಲ್ಲಿ ಶಾಸನಬದ್ಧ ದಾಖಲಾತಿಗಳನ್ನು ಪಡೆದು ಅಧಿಕೃತವಾಗಿ ಮಂಜೂರು ಮಾಡಿರುವ ಕಲ್ಲುಗಣಿ ಗುತ್ತಿಗೆಗಳ ವಿವರಗಳನ್ನು ಮೇಲಿನ ಪ್ರಶ್ನೆ ಸಂಖ್ಯೆ:(ಅ)ನ ಉತ್ತರದಲ್ಲಿ ತಿಳಿಸಿದೆ. ಕಳೆದ 03 ವರ್ಷಗಳಲ್ಲಿ ಅನಧಿಕೃತವಾಗಿ ಕಲ್ಲುಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಂಡು ಮೊಕದ್ದಮೆಗಳನ್ನು ದಾಖಲಿಸಿ, ದಂಡವನ್ನು ಸಂಗ್ರಹಿಸಲಾಗಿರುವ ವಿವರ ಕೆಳಕಂಡಂತಿದೆ:

ಕ್ರ. ಸಂ.	ಜಿಲ್ಲೆ	ವರ್ಷ	ಪತ್ತೆ ಹಚ್ಚಿದ ಅನಧಿಕೃತ ಕಲ್ಲುಗಣಿಗಾರಿಕೆ ಪ್ರಕರಣಗಳ ಸಂಖ್ಯೆ	ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ	ಸಂಗ್ರಹಿಸಿದ ದಂಡದ ಮೊತ್ತ (ರೂ.ಲಕ್ಷಗಳಲ್ಲಿ)
1	ರಾಮನಗರ	2016-17	3	3	--
		2017-18	3	2	2.75
		2018-19	7	3	185.32

2	ತುಮಕೂರು	2016-17	3	3	–
		2017-18	6	6	–
		2018-19	2	2	–
3	ಚಾಮರಾಜನಗರ	2016-17	21	63	10.79
		2017-18	15	8	30.97
		2018-19	8	9	6.20
4	ಮಂಡ್ಯ	2016-17	166	2	17.35
		2017-18	129	9	30.20
		2018-19	3	3	–
5	ಮೈಸೂರು	2016-17	3	3	12.17
		2017-18	4	4	50.00
		2018-19	15	15	24.00

ಇ

ಗಣಿಗಾರಿಕೆಯಿಂದ ರಾಜಧನ ಸಂಗ್ರಹಿಸುವ ಮಾನದಂಡವೇನು; (ಪ್ರತಿ ಲಾರಿ ಲೋಡ್ ಅಥವಾ ತೂಕದ ಆಧಾರ) ಕಳೆದ ಮೂರು ವರ್ಷಗಳಿಂದ ಸಂಗ್ರಹವಾಗಿರುವ (ಗಣಿಗಾರಿಕೆಯಿಂದ) ರಾಜಧನವೆಷ್ಟು;

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 36ರ ಷೆಡ್ಯೂಲ್-IIರಲ್ಲಿ ಸರ್ಕಾರದಿಂದ ಕಾಲಕಾಲಕ್ಕೆ ಉಪಖನಿಜಗಳ ಮೇಲಿನ ರಾಜಧನದ ದರಗಳನ್ನು ಪರಿಷ್ಕರಿಸಿ ಅಧಿಸೂಚನೆ ಜಾರಿ ಮಾಡಲಾಗುತ್ತದೆ. ಪ್ರಸ್ತುತ ಚಾಲ್ತಿಯಲ್ಲಿರುವಂತೆ ಅಲಂಕಾರಿಕ ಶಿಲೆಗಳಿಗೆ ಮಾರುಕಟ್ಟೆ ಮೌಲ್ಯದ ಶೇಕಡ 15ರಷ್ಟು ದರ ಅಥವಾ ಮಾರ್ಗಸೂಚಿ ದರ ಯಾವುದು ಹೆಚ್ಚು ಆ ಮೊತ್ತವನ್ನು ರಾಜಧನವನ್ನಾಗಿ ಪಾವತಿಸಿಕೊಳ್ಳಲಾಗುತ್ತದೆ.

ಕಟ್ಟಡ ಕಲ್ಲು ಸೇರಿದಂತೆ ಇತರೆ ಉಪಖನಿಜಗಳಿಗೆ ಮೆಟ್ರಿಕ್ ಟನ್ / ಕ್ಯೂಬಿಕ್ ಮೀಟರ್ ಆಧಾರದ ಮೇರೆಗೆ ರಾಜಧನ ಪಾವತಿಸಿಕೊಳ್ಳಲಾಗುತ್ತದೆ.

ಕಳೆದ 03 ವರ್ಷಗಳಿಂದ ಸಂಗ್ರಹವಾಗಿರುವ ರಾಜಧನದ ವಿವರ ಕೆಳಕಂಡಂತಿದೆ:

ಕ್ರ ಸಂ.	ಜಿಲ್ಲೆ	ವರ್ಷ	ಸಂಗ್ರಹಿಸಿದ ರಾಜಧನ ಮೊತ್ತ (ರೂ.ಲಕ್ಷಗಳಲ್ಲಿ)
1	ರಾಮನಗರ	2016-17	2753.95
		2017-18	2546.08
		2018-19	2905.11
2	ತುಮಕೂರು	2016-17	5422.73
		2017-18	4588.25
		2018-19	3260.94
3	ಚಾಮರಾಜನಗರ	2016-17	2609.86
		2017-18	2217.84
		2018-19	1593.38
4	ಮಂಡ್ಯ	2016-17	2552.49
		2017-18	1736.29
		2018-19	1187.60
5	ಮೈಸೂರು	2016-17	48.62
		2017-18	69.87
		2018-19	50.20

ಈ	ಗಣಿಗಾರಿಕೆಯಿಂದ ಬಾಧಿತವಾದ ಗ್ರಾಮಗಳಲ್ಲಿ. ಸಂಗ್ರಹಿಸಲಾದ ರಾಜಧನದಿಂದ ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳು ಯಾವುವು; ಸದರಿ ಯೋಜನೆಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)	ಕರ್ನಾಟಕ ಗೌಣ ಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 36-Aರಂತೆ ಹರಾಜು ರಹಿತವಾಗಿ ಮಂಜೂರು ಮಾಡಿರುವ ಗುತ್ತಿಗೆದಾರರಿಂದ ರಾಜಧನದ ಶೇ.30ರಷ್ಟು ಮೊತ್ತವನ್ನು ಹಾಗೂ ಹರಾಜು ಮೂಲಕ ಮಂಜೂರು ಮಾಡಿದ ಕಲ್ಲುಗಣಿ ಗುತ್ತಿಗೆದಾರರಿಂದ ರಾಜಧನದ ಶೇ.10ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ಸಂಗ್ರಹಿಸಲಾಗುತ್ತಿದೆ. ಜಿಲ್ಲೆಯಲ್ಲಿ ಸಂಗ್ರಹವಾಗುವ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಮೊತ್ತವನ್ನು ಗಣಿಬಾಧಿತ ಪ್ರದೇಶದಲ್ಲಿನ ಗ್ರಾಮಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ವೆಚ್ಚ ಮಾಡಲಾಗುತ್ತಿದೆ. ಮೇಲ್ಕಂಡ ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ಟ್ರಸ್ಟ್ ವತಿಯಿಂದ ಸಂಗ್ರಹಿಸಿದ ವಂತಿಕೆ, ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಂಚಿಕೆಯಾದ ಮತ್ತು ಖರ್ಚು ಮಾಡಿದ ಹಣದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಸಿಐ 49 ಎಂಎಂಎನ್ 2019

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಅನುಬಂಧ

ಡಿಎಂಎಫ್‌ಟಿ ಅಡಿಯಲ್ಲಿ ಸಂಗ್ರಹಿಸಿದ ಮೊತ್ತ, ಅನುಮೋದಿತ ಕ್ರಿಯಾಯೋಜನೆ ಹಾಗೂ ಖರ್ಚಾದ ಮೊತ್ತದ ವಿವರಗಳು (ರೂ. ಲಕ್ಷಗಳಲ್ಲಿ)

ಸಂಖ್ಯೆ	ಅಭಿವೃದ್ಧಿಯಲ್ಲಿರುವ ಯೋಜನೆಗಳ ವಿವರಗಳು	ಮೈಸೂರು			ತುಮಕೂರು			ರಾಮನಗರ			ಚಾಮರಾಜನಗರ			ಮಂಡ್ಯ		
		DMF ಸಂಗ್ರಹಣೆ	ಅನುಮೋದಿತ ಕ್ರಿಯಾಯೋಜನೆ	ಖರ್ಚು	DMF ಸಂಗ್ರಹಣೆ	ಅನುಮೋದಿತ ಕ್ರಿಯಾಯೋಜನೆ	ಖರ್ಚು	DMF ಸಂಗ್ರಹಣೆ	ಅನುಮೋದಿತ ಕ್ರಿಯಾಯೋಜನೆ	ಖರ್ಚು	DMF ಸಂಗ್ರಹಣೆ	ಅನುಮೋದಿತ ಕ್ರಿಯಾಯೋಜನೆ	ಖರ್ಚು	DMF ಸಂಗ್ರಹಣೆ	ಅನುಮೋದಿತ ಕ್ರಿಯಾಯೋಜನೆ	ಖರ್ಚು
1	ಕುಡಿಯುವ ನೀರು		0.00	0.00		383.44	5.00		16.00	0.00		72.00	0.00		0.00	0.00
2	ಪರಿಸರ ಮಾಲಿನ್ಯ ತಡೆಗಟ್ಟುವಿಕೆ ನಿಯಂತ್ರಣ ಕಾರ್ಯಗಳಿಗೆ		0.00	0.00		23.15	0.00		0.00	0.00		0.00	0.00		0.00	0.00
3	ಆರೋಗ್ಯ ರಕ್ಷಣ		6.33	0.00		300.00	300.00		85.00	18.75		25.00	0.00		0.00	0.00
4	ಶಿಕ್ಷಣ		16.05	1.12		556.23	0.00		97.00	63.75		180.00	0.00		0.00	0.00
5	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಂಬಂಧ ಕಾರ್ಯಕ್ರಮ		0.00	0.00		50.00	50.00		30.00	0.00		0.00	0.00		0.00	0.00
6	ವಯಸ್ಸಾದ ಮತ್ತು ಅಂಗವಿಕಲ ವ್ಯಕ್ತಿಗಳ ಕಲ್ಯಾಣ.	62.35	0.00	0.00	1299.16	0.00	0.00	1739.91	30.00	0.00	1104.37	0.00	0.00	40.57	0.00	0.00
7	ಕೌಶಲ್ಯಾಭಿವೃದ್ಧಿ ಕಾರ್ಯಗಳಿಗೆ		0.00	0.00		22.58	0.00		0.00	0.00		0.00	0.00		0.00	0.00
8	ನೈರ್ಮಲ್ಯತೆ		0.00	0.00		2.50	0.00		60.00	45.00		0.00	0.00		0.00	0.00
9	ಭೌತಿಕ ಮೂಲಸೌಕರ್ಯ		0.00	0.00		228.10	0.00		95.00	71.25		100.00	0.00		0.00	0.00
10	ನೀರಾವರಿ		0.00	0.00		0.00	0.00		0.00	0.00		107.00	0.00		0.00	0.00
11	ಶಕ್ತಿ ಮತ್ತು ನೀರಿನ ಅಭಿವೃದ್ಧಿ		0.00	0.00		0.00	0.00		0.00	0.00		0.00	0.00		0.00	0.00
12	ಇನ್ನಿತರೆ ಗಣಿಗಾರಿಕೆ ಜಿಲ್ಲೆಗಳಲ್ಲಿ ಪರಿಸರದ ಗುಣಮಟ್ಟ ಹೆಚ್ಚಿಸುವುದು.		0.00	0.00		133.22	133.22		198.00	74.25		0.00	0.00		0.00	0.00
	ಒಟ್ಟು	**62.35**	**22.38**	**1.12**	**1299.16**	**1699.22**	**488.22**	**1739.91**	**611.00**	**273.00**	**1104.37**	**484.00**	**0.00**	**40.57**	**0.00**	**0.00**

M.C. [signature] 3/2

Deputy Director (Min. Admn.)
Dept. of Mines & Geology
Bangalore-560 001.

CI 49 MMN 2019

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:	207
ಸದಸ್ಯರ ಹೆಸರು:	ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)
ಉತ್ತರಿಸಬೇಕಾದವರು:	ಮುಖ್ಯಮಂತ್ರಿಯವರು
ಉತ್ತರಿಸಬೇಕಾದ ದಿನಾಂಕ:	12-02-2019

ಕ್ರ ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಮದ್ಯಪಾನ ನಿಷೇಧಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಮದ್ಯಪಾನ ನಿಷೇಧಿಸುವ ಕುರಿತು ಸಾರ್ವಜನಿಕರು ಹಾಗೂ ವಿವಿಧ ಸಂಘ ಸಂಸ್ಥೆಗಳು ವ್ಯಾಪಕ ಪ್ರತಿಭಟನೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ. ರಾಜ್ಯದಲ್ಲಿ ಮದ್ಯ ನಿಷೇಧಕ್ಕೆ ಒತ್ತಾಯಿಸಿ ರಾಜ್ಯದ ವಿವಿಧ ಸಂಘಟನೆಗಳು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.
ಆ	ಬಂದಿದ್ದಲ್ಲಿ, ರಾಜ್ಯದಲ್ಲಿ ಮದ್ಯಪಾನ ನಿಷೇಧಿಸುವ ಕುರಿತು ಸರ್ಕಾರ ತೆಗೆದುಕೊಂಡಿರುವ ನಿಲುವುಗಳೇನು; (ವಿವರ ಒದಗಿಸುವುದು);	ರಾಜ್ಯದಲ್ಲಿ ಮದ್ಯಪಾನ ನಿಷೇಧಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.
ಇ	ಮದ್ಯಪಾನ ನಿಷೇಧ ಮಾಡಿದಲ್ಲಿ ಸರ್ಕಾರದ ಆದಾಯದಲ್ಲಿ ಪ್ರತಿಶತ ಎಷ್ಟು ಪ್ರಮಾಣ ಕಡಿಮೆಯಾಗಲಿದೆ;	ಉದ್ಭವಿಸುವುದಿಲ್ಲ.
ಈ	ಕಡಿತವಾಗಲಿರುವ ಆದಾಯದಿಂದ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರ ಯಾವ ರೀತಿಯಲ್ಲಿ ಸಂಪನ್ಮೂಲ ಕ್ರೋಢೀಕರಣ ಮಾಡಲಾಗುವುದು? (ಸಂಪೂರ್ಣ ವಿವರ ಒದಗಿಸುವುದು)	ಉದ್ಭವಿಸುವುದಿಲ್ಲ.

ಆಇ 05 ಇಎಲ್‌ಕ್ಯೂ 2019

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

KARNATAKA LEGISLATIVE ASSEMBLY

Starred Question No.	207
Name of the Member	Sri Vishweshwar Hegde Kageri (Sirsi)
To be replied by	Chief Minister
Date of reply	12-02-2019

Sl. No.	Question	Answer
A	Is there any proposal before the Government to ban liquor consumption in the State; Whether the Government is aware that the public and various Organizations & Associations are having wide-spread protest to ban liquor consumption;	No. It has come to notice of the Government some organizations have submitted a memorandum requesting ban of liquor in the State.
B	If so, what is the stand taken by the Government to ban liquor consumption in the State (furnish details);	There is no proposal before the Government to ban liquor consumption in the State.
C	If liquor consumption is banned how much revenue will be reduced;	Does not arise.
D	Because of revenue reduction, how will Government mobilize resources for development works? (furnished complete details);	Does not arise.

FD 05 ELQ 2019

Sd/-
(H.D.KUMARASWAMY)
CHIEF MINISTER

5

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 37
ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ರಾಜ್‌ಕುಮಾರ್ ಪಾಟೀಲ್ (ಸೇಡಂ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು
ಉತ್ತರಿಸುವ ದಿನಾಂಕ : 12.02.2019

ಕ್ರ.ಸಂ.	ಪ್ರಶ್ನೆ	ಉತ್ತರ	Reply
ಅ)	ಸೇಡಂ ತಾಲ್ಲೂಕಿನಲ್ಲಿರುವ ಸಿ.ಸಿ.ಐ. ಕುರಕುಂಟಾ ಕಾರ್ಖಾನೆಯು ಹಲವಾರು ವರ್ಷಗಳಿಂದ ಮುಚ್ಚಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.	Yes
ಆ)	ಹಾಗಿದ್ದಲ್ಲಿ ಸದರಿ ಕಾರ್ಖಾನೆಯನ್ನು ಪುನರ್ ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದೆಯೇ (ಪೂರ್ಣ ಮಾಹಿತಿ ಒದಗಿಸುವುದು)?	ಸೇಡಂ ತಾಲ್ಲೂಕಿನಲ್ಲಿ ಸಿಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ (ಸಿ.ಸಿ.ಐ) ಕುರಕುಂಟಾ ಕಾರ್ಖಾನೆಯು ಕೇಂದ್ರ ಸರ್ಕಾರಿ ಸ್ವಾಮ್ಯದ ಕಂಪನಿಯಾಗಿದ್ದು, ಸದರಿ ಕಾರ್ಖಾನೆಯನ್ನು 1998ನೇ ಸಾಲಿನಲ್ಲಿ ಮುಚ್ಚಲಾಗಿದ್ದು, ಹಾಲಿ Disinvestment ಕ್ರಮದಲ್ಲಿ ಇರುವ ಬಗ್ಗೆ ತಿಳಿದು ಬಂದಿದೆ. ಈ ಕಾರ್ಖಾನೆಯು ರಾಜ್ಯ ಸರ್ಕಾರದ ವ್ಯಾಪ್ತಿಯಡಿ ಬರುವುದಿಲ್ಲ.	Cement Corporation of India (CCI) Kurakunta Factory in Sedam Taluk is a Central Public Sector Undertaking, it is learnt that the factory was closed during 1998 and it is under Disinvestment process. This factory does not come under the purview of the State Government.

ಸಿಐ 39 ಎಸ್‌ಪಿಐ 2019

(ಕೆ.ಜೆ. ಜಾರ್ಜ್) 11/2/19
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

Supplementary Note to Starred LAQ No. 37

- Cement Corporation of India Ltd. (CCI) is a Central Public Sector Undertaking.
- Established Cement Plant in Kurkunata Village, Gulbarga District during 1972.
- Installed Capacity - 2 lakh tonne per annum.
- Land - 932 acres.
- Non-operational since 1.11.1998.
- Now is under disinvestment process.
- It does not come under the purview of State Government.

6

ಇಂಧನ ಇಲಾಖೆಯಿಂದ
ವರ್ಗಾವಣೆಗೊಂಡ ಪ್ರಶ್ನೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	16
ಸದಸ್ಯರ ಹೆಸರು	:	ರವೀಂದ್ರ ನಾಥ ಎಸ್.ಎ (ದಾವಣಗೆರೆ ಉತ್ತರ)
ಉತ್ತರಿಸುವ ದಿನಾಂಕ	:	12.02.2019
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಭದ್ರಾ ನಾಲಾ ಮತ್ತು ಉಪನಾಲೆಗಳಿಗೆ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:	ಹೌದು.
ಆ)	ಈ ಅಕ್ರಮ ಪಂಪ್ ಸೆಟ್‌ಗಳ ಅಳವಡಿಕೆಯಿಂದ ಮೇಲ್ಭಾಗದ ಹಂತದಲ್ಲಿ ಹೆಚ್ಚು ನೀರು ಬಳಕೆಯಾಗುತ್ತಿದ್ದು, ಅಚ್ಚುಕಟ್ಟಿನ ಕೊನೆಯ ಭಾಗದ ಜಮೀನುಗಳಿಗೆ ಸಮರ್ಪಕ ನೀರು ಪೂರೈಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:	
ಇ)	ಹಾಗಿದ್ದಲ್ಲಿ, ಈ ಅಕ್ರಮ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಿ, ಸಂಬಂಧಪಟ್ಟವರ ವಿರುದ್ಧ ಕ್ರಮವನ್ನು ಜರುಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ:	ಭದ್ರಾ ನಾಲೆ ಮತ್ತು ಉಪ ನಾಲೆಗಳಿಗೆ ಅಳವಡಿಸಲಾಗಿರುವ ಅಕ್ರಮ ಪಂಪ್‌ಸೆಟ್‌ಗಳ ಮಾಹಿತಿಯನ್ನು ನೀಡಿದಲ್ಲಿ, ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕ್ರಮವಹಿಸಲಾಗುವುದು ಎಂದು ಇಂಧನ ಇಲಾಖೆಯು ತಿಳಿಸಿರುವ ಹಿನ್ನಲೆಯಲ್ಲಿ ಭದ್ರಾ ನಾಲೆ ಮತ್ತು ಉಪ ನಾಲೆಗಳಿಗೆ ಅಳವಡಿಸಲಾಗಿರುವ ಅಕ್ರಮ ಪಂಪ್‌ಸೆಟ್‌ಗಳ ಮಾಹಿತಿಯನ್ನು ಇಂಧನ ಇಲಾಖೆಗೆ ನೀಡಲು ಕ್ರಮವಹಿಸಲಾಗುತ್ತಿದೆ.
ಈ)	ಯಾವ ಕಾಲಮಿತಿಯಲ್ಲಿ ಅಕ್ರಮ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು?	

ಸಂಖ್ಯೆ: ಜಸಂಇ 04 ಎಂಎಲ್‌ಎ 2019

[ಡಿ.ಕೆ. ಶಿವಕುಮಾರ್]
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 239

ಸದಸ್ಯರ ಹೆಸರು : ಶ್ರೀ ಸೋಮಲಿಂಗಪ್ಪ ಎಂ ಎಸ್(ಸಿರಗುಪ್ಪ)

ಉತ್ತರಿಸುವ ದಿನಾಂಕ : 12.02.2019

ಉತ್ತರಿಸುವ ಸಚಿವರು : ಮಾನ್ಯ ಉನ್ನತ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಸಿರುಗುಪ್ಪ ವಿಧಾನ ಸಭಾ ಕ್ಷೇತ್ರಕ್ಕೆ ಅಗತ್ಯವಾಗಿ ಬೇಕಾಗಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ;	ಇಲ್ಲ.
ಆ	ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಉದ್ಭವಿಸುವುದಿಲ್ಲ
ಇ	ಈ ಕಾಲೇಜನ್ನು ಯಾವಾಗ ತೆರೆಯಲಾಗುವುದು? (ಮಾಹಿತಿ ಒದಗಿಸುವುದು)	ಉದ್ಭವಿಸುವುದಿಲ್ಲ

ಇಡಿ 13 ಹೆಚ್‌ಪಿಯು 2019

ಜಿ.ಟಿ ದೇವೇಗೌಡ
ಉನ್ನತ ಶಿಕ್ಷಣ ಸಚಿವರು

8

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 848
ಸದಸ್ಯರ ಹೆಸರು : ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ).
ಉತ್ತರಿಸುವ ದಿನಾಂಕ : 12.02.2019.
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ವಿಧಾನ ಸಭಾ ಕ್ಷೇತ್ರಕ್ಕೆ ಪ್ರೌಢ ಶಾಲೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. 2017-18ನೇ ಸಾಲಿನಲ್ಲಿ ಯಲಬುರ್ಗಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಣಗೇರಿ, ಮುರಡಿ ಮತ್ತು ಕೋಣಸಾಗರ ಗ್ರಾಮಗಳಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ ಹಾಗೂ 2018-19ನೇ ಸಾಲಿನಲ್ಲಿ ಆರ್.ಎಂ.ಎಸ್.ಎ ಯೋಜನೆ ಅಡಿಯಲ್ಲಿ ಹುಣಸಿನಾಳ ಗ್ರಾಮಕ್ಕೆ ಸರ್ಕಾರಿ ಪ್ರೌಢಶಾಲೆಯನ್ನು ಮಂಜೂರು ಮಾಡಲಾಗಿದೆ.
ಆ)	ಸದರಿ ಶಾಲೆಯಲ್ಲಿ ಶಿಕ್ಷಕರ ಹುದ್ದೆಗಳು ಮಂಜೂರಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಬಂದಿದ್ದಲ್ಲಿ, ಶಿಕ್ಷಕರ ಕೊರತೆಯಿಂದ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯಾಗಿರುವುದರಿಂದ ಸರ್ಕಾರ ಕೈಗೊಂಡ ಪರ್ಯಾಯ ವ್ಯವಸ್ಥೆಗಳೇನು;	10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯಾಗದಂತೆ ಶಿಕ್ಷಕರುಗಳನ್ನು ನಿಯೋಜಿಸುವ ಮೂಲಕ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.
ಈ)	ಈ ಪ್ರೌಢ ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?	ಈಗಾಗಲೇ ಸದರಿ ಶಾಲೆಗಳಿಗೆ ಅಗತ್ಯ ಶಿಕ್ಷಕರುಗಳನ್ನು ನಿಯೋಜಿಸಲಾಗಿದೆ.

ಸಂಖ್ಯೆ: ಇಡಿ 85 ಎಸ್‌ಇಎಸ್ 2019)

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.

9

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	718
ಸದಸ್ಯರ ಹೆಸರು	ಶ್ರೀ ಗೋವಿಂದ ಎಂ.ಕಾರಜೋಳ್ (ಮುಧೋಳ)
ಉತ್ತರಿಸುವ ದಿನಾಂಕ	12.02.2019
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ಪ್ರಸಕ್ತ ಸಾಲಿನಲ್ಲಿ ಹಿಂಗಾರು ಮತ್ತು ಮುಂಗಾರು ಮಳೆ ಆಗದೇ ಇರುವುದರಿಂದ ಕಬ್ಬು ಬೆಳೆದ ರೈತರು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	– ಹೌದು – – Yes –
(ಆ)	ಹಾಗಿದಲ್ಲಿ, ಪ್ರಸಕ್ತ ಸಾಲಿನಲ್ಲಿ ಎಷ್ಟು ಎಕರೆ ಕಬ್ಬು ಬೆಳೆ ನಾಶವಾಗಿದೆ; ನಷ್ಟದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಕಬ್ಬು ಬೆಳೆ ನಾಶವಾಗಿರುವ ಹಾಗೂ ನಷ್ಟದ ಮೊತ್ತದ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ. Details of District wise sugarcane crop loss and details of the extent of damage is as below:

ಕ್ರ ಸಂ	ಜಿಲ್ಲೆಗಳು	ಮುಂಗಾರು ಹಂಗಾಮು		ಹಿಂಗಾರು ಹಂಗಾಮು	
		ವಿಸ್ತೀರ್ಣ (ಹೆ.ಗಳಲ್ಲಿ)	ನಷ್ಟದ ಪ್ರಮಾಣ (NDRF) ನಿಯಮಾವಳಿಗಳಂತೆ ಲಕ್ಷ ರೂ.ಗಳಲ್ಲಿ	ವಿಸ್ತೀರ್ಣ (ಹೆ.ಗಳಲ್ಲಿ)	ನಷ್ಟದ ಪ್ರಮಾಣ (NDRF) ನಿಯಮಾವಳಿಗಳಂತೆ ಲಕ್ಷ ರೂ.ಗಳಲ್ಲಿ
1	ಚಿತ್ರದುರ್ಗ	15.0	2.025	0	0
2	ಗದಗ	0	0	50.0	6.75
3	ಬೆಳಗಾವಿ	0	0	98.0	13.23
4	ವಿಜಯಪುರ	0	0	6871.0	927.585
5	ಕಲಬುರಗಿ	6416.0	866.16	0	0
	ರಾಜ್ಯ	**6431.0**	**868.185**	**7019.0**	**947.565**

ಕ್ರ ಸಂ.	ಪ್ರಶ್ನೆ	ಉತ್ತರ
(ಇ)	ಇನ್ನುಳಿದ ಬೆಳೆಗಳಿಗೆ ಪರಿಹಾರ ನೀಡಿದ ರೀತಿಯಲ್ಲಿಯೇ ಕಬ್ಬು ಬೆಳೆಗಾರರಿಗೆ ಪರಿಹಾರ ನೀಡದೇ ಇರುವುದಕ್ಕೆ ಕಾರಣಗಳೇನು;	ಮುಂಗಾರು ಮತ್ತು ಹಿಂಗಾರು ಬರ ಪರಿಹಾರಕ್ಕಾಗಿ ಆರ್ಥಿಕ ನೆರವನ್ನು ಕೋರುತ್ತಾ ಕೇಂದ್ರ ಸರ್ಕಾರಕ್ಕೆ Memorandum ಸಲ್ಲಿಸಲಾಗಿದ್ದು, ಕೇಂದ್ರದಿಂದ ಅನುದಾನ ಬಿಡುಗಡೆಯಾದ ನಂತರ ಎಸ್.ಡಿ.ಆರ್.ಎಫ್ / ಎನ್.ಡಿ.ಆರ್.ಎಫ್ ಮಾರ್ಗಸೂಚಿಯ ಪ್ರಕಾರ ಕಬ್ಬು ಬೆಳೆ ಹಾನಿಗೆ ಇನ್‌ಪುಟ್ ಸಬ್ಸಿಡಿ ಪಾವತಿಸಲಾಗುವುದು. Memorandum has been submitted by Govt. of Karnataka for the Financial Assistance of drought affected talukas of kharif and rabi season. As soon as the Central Government release the funds, the input subsidy will be paid for the sugarcane crop loss as per SDRF / NDRF guidelines.
(ಈ)	ಎಷ್ಟು ದಿನಗಳಲ್ಲಿ ಕಬ್ಬು ಬೆಳೆಗಾರರಿಗೆ ಪರಿಹಾರ ನೀಡಲಾಗುವುದು?	

ಸಂಖ್ಯೆ: ಕೃಇ 21 ಕೃಮಸ 2019

(ಎನ್.ಹೆಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು
N.H. SHIVASHANKARA REDDY
Agriculture Minister

10

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 810
ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಲಕ್ಷ್ಮೀ ಆರ್ ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)
ಉತ್ತರಿಸುವ ದಿನಾಂಕ : 12-02-2019
ಉತ್ತರಿಸುವ ಸಚಿವರು : ಉನ್ನತ ಶಿಕ್ಷಣ ಸಚಿವರು

	ಪ್ರಶ್ನೆ	ಉತ್ತರ
ಅ)	ಉತ್ತರ ಕರ್ನಾಟಕ ಭಾಗದ ಧಾರವಾಡದಲ್ಲಿ ಸ್ಥಾಪಿಸಬೇಕೆಂದಿರುವ ಐ.ಐ.ಟಿ ಯನ್ನು ಯಾವಾಗ ಪ್ರಾರಂಬಿಸಲಾಗುವುದು:	ಈಗಾಗಲೇ ಐ.ಐ.ಟಿ ಸಂಸ್ಥೆಯನ್ನು ಧಾರವಾಡದಲ್ಲಿ 2016ನೇ ಸಾಲಿನಲ್ಲಿ ಸ್ಥಾಪಿಸಲಾಗಿದೆ ಹಾಗೂ ದಿನಾಂಕ: 10-02-2019 ರಂದು ಮಾನ್ಯ ಪ್ರಧಾನ ಮಂತ್ರಿಯವರು ಶಿಲಾನ್ಯಾಸವನ್ನು ನೆರವೇರಿಸಲು ಕಾರ್ಯಕ್ರಮವನ್ನು ನಿಗಧಿಪಡಿಸಲಾಗಿದೆ.
ಆ)	ಈ ಸಂಸ್ಥೆಯ ಸ್ಥಾಪನೆಗೆ ಸ್ಥಳ ಗುರುತಿಸಲಾಗಿದೆಯೇ: ಎಷ್ಟು ಮಂದಿ ವಿಧ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗುವುದು(ಸಂಪೂರ್ಣ ಮಾಹಿತಿ ಒದಗಿಸುವುದು)?	ಹೌದು. ಪ್ರಸ್ತುತ ಐ.ಐ.ಟಿ ಸಂಸ್ಥೆಯ ಶೈಕ್ಷಣಿಕ ಚಟುವಟಿಕೆಗಳನ್ನು ತಾತ್ಕಾಲಿಕ ಕ್ಯಾಂಪಸ್ ಆದ ವಾಲ್ಮಿ ಕಟ್ಟಡ, ಧಾರವಾಡ ಇಲ್ಲಿ ನಡೆಸಲಾಗುತ್ತಿದೆ. ಧಾರವಾಡ ಜಿಲ್ಲೆಯ ಮಮ್ಮಿಗಟ್ಟಿ ಕೈಗಾರಿಕೆ ಪ್ರದೇಶಕ್ಕೆ ಹೊಂದಿಕೊಂಡಿರುವ ಕೆಳಗೇರಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ 470 ಏಕರೆ 21 ಗುಂಟೆ ಭೂಮಿಯನ್ನು ಐ.ಐ.ಟಿ ಸ್ಥಾಪನೆಗಾಗಿ ಕರ್ನಾಟಕ ಸರ್ಕಾರವು ನೀಡಿದೆ. ಸ್ಥಳದ ವಿಳಾಸವು ಈ ಕೆಳಕಂಡಂತೆ ಇದೆ. **ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಧಾರವಾಡ, ಚಿಕ್ಕಮಲ್ಲಿಗವಾಡ ಹಳ್ಳಿಯ ಹತ್ತಿರ, ಧಾರವಾಡ, ಕರ್ನಾಟಕ** 2018-19ನೇ ಶೈಕ್ಷಣಿಕ ಸಾಲಿನಲ್ಲಿ 3ನೇ ವರ್ಷದ ವರೆಗೆ ಬಿ.ಟೆಕ್ ಪ್ರೋಗ್ರಾಂಗೆ ಒಟ್ಟು 345 ವಿದ್ಯಾರ್ಥಿಗಳಿಗೆ ಮತ್ತು 3ನೇ ವರ್ಷದ ವರೆಗೆ ಪಿ.ಹೆಚ್.ಡಿ ಪ್ರೋಗ್ರಾಂ ಗೆ ಒಟ್ಟು 26 ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಲಾಗಿದೆ. ವರ್ಷವಾರು ಪ್ರವೇಶಾತಿ ವಿವರ ಈ ಕೆಳಕಂಡಂತಿದೆ

ಬಿ.ಟೆಕ್

ಕೋರ್ಸ್/ವರ್ಷ	2016	2017	2018
ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್	39	37	39
ಎಲೆಕ್ಟ್ರಿಕಲ್ ಇಂಜಿನಿಯರಿಂಗ್	37	38	39
ಮೆಕ್ಯಾನಿಕಲ್ ಇಂಜಿನಿಯರಿಂಗ್	38	38	40
ಒಟ್ಟು	114	113	118

ph.D

ಕೋರ್ಸ್	2017	2018
BSBE	0	1
Chemistry	0	1
CSE	0	2
EE	1	7
HSS	1	1
Mathematics	0	1
ME	3	5
Physics	0	3
Total	5	21

ಇಡಿ 20 ಟಿಜಿಎಲ್ 2019

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

11

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 561

ಸದಸ್ಯರ ಹೆಸರು : ಶ್ರೀ ಭೀಮಾನಾಯ್ಕ ಎಲ್.ಬಿ.ಪಿ. (ಹಗರಿಬೊಮ್ಮನಹಳ್ಳಿ)

ಉತ್ತರಿಸುವ ದಿನಾಂಕ : 12.02.2019

ಉತ್ತರಿಸುವ ಸಚಿವರು : ಮಾನ್ಯ ಉನ್ನತ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಕೊಟ್ಟೂರು ಪಟ್ಟಣದಲ್ಲಿ ಸರ್ಕಾರಿ ಪದವಿ ಕಾಲೇಜು ಇಲ್ಲದಿರುವುದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕಿದೆಯೇ;	ಗಮನಕ್ಕೆ ಬಂದಿದೆ.
ಸದರಿ ಪಟ್ಟಣದಲ್ಲಿ ಸರ್ಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ;	ಇಲ್ಲ
ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು (ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ

ಇಡಿ 23 ಪಿಜಿಸಿ 2019

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:	14
ಸದಸ್ಯರ ಹೆಸರು :	ಶ್ರೀ ಗುತ್ತೇದಾರ್ ಸುಭಾಷ್ ರುಕ್ಕಯ್ಯ (ಆಳಂದ)
ಉತ್ತರಿಸಬೇಕಾದ ದಿನಾಂಕ:	12.02.2019.
ಉತ್ತರಿಸುವ ಸಚಿವರು :	ಗಣಿ ಮತ್ತು ಭೂವಿಜ್ಞಾನ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯ ಆಳಂದ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ಮರಳನ್ನು ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;</td><td>

- ಆಳಂದ ತಾಲ್ಲೂಕಿನಲ್ಲಿ ಮರಳು ನಿಕ್ಷೇಪಗಳು ಲಭ್ಯವಿಲ್ಲದ ಕಾರಣ ಯಾವುದೇ ಮರಳು ಬ್ಲಾಕ್‌ಗಳನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸದರಿ ಪ್ರದೇಶದಲ್ಲಿ ಮರಳು ಗುತ್ತಿಗೆಗೆ ಮಂಜೂರಾತಿ ನೀಡಿರುವುದಿಲ್ಲ.
- ಆದರೆ ಆಳಂದ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಹಾಗೂ ಸಾರ್ವಜನಿಕರಿಗೆ ಮರಳಿಗೆ ಸಂಬಂಧಿಸಿದಂತೆ ಕೋರಿಕೆ ಅರ್ಜಿಗಳು ಬಂದಾಗ ಚಿತ್ತಾಪುರ ತಾಲ್ಲೂಕಿನ ಕುಂದನೂರು ಗ್ರಾಮದಲ್ಲಿ KRIDL ವಿಭಾಗ-1 ಇವರಿಗೆ ಮಂಜೂರು ಮಾಡಿರುವ ಬ್ಲಾಕ್‌ನಿಂದ ಹಾಗೂ ಜೇವರ್ಗಿ ಮತ್ತು ಅಫಜಲಪೂರ ತಾಲ್ಲೂಕುಗಳಲ್ಲಿ ಜಪ್ತಿಮಾಡಿರುವ ಮರಳನ್ನು ಲೋಕೋಪಯೋಗಿ ಇಲಾಖೆಯಿಂದ ಪರವಾನಿಗೆ ಮೂಲಕ ಪೂರೈಕೆ ಮಾಡಲಾಗುತ್ತಿದೆ.
- ಇದುವರೆಗೆ ಲೋಕೋಪಯೋಗಿ ಇಲಾಖೆ ಹಾಗೂ KRIDL ವಿಭಾಗ-1 ರಿಂದ ಪೂರೈಕೆಯಾಗಿರುವ ಮರಳಿನ ವಿವರ.

<table>
<tr><th>ಕ್ರ.ಸಂ</th><th>ತಾಲ್ಲೂಕು</th><th>ಇಲಾಖೆ</th><th>ಪೂರೈಕೆ ಯಾಗಿರುವ ಮರಳಿನ ಪ್ರಮಾಣ ಮೆ.ಟನ್ ಗಳಲ್ಲಿ</th></tr>
<tr><td>1</td><td>ಜೇವರ್ಗಿ</td><td>ಲೋಕೋಪಯೋಗಿ ಇಲಾಖೆ</td><td>169</td></tr>
<tr><td>2</td><td>ಅಫಜಲಪೂರ</td><td>ಲೋಕೋಪಯೋಗಿ ಇಲಾಖೆ</td><td>3400</td></tr>
<tr><td>3</td><td>ಚಿಂಚೋಳಿ</td><td>ಕೆ.ಆರ್.ಐ.ಡಿ.ಎಲ್</td><td>516</td></tr>
<tr><td></td><td></td><td>ಒಟ್ಟು</td><td>4085</td></tr>
</table>
</td></tr>
<tr><td>ಆ)</td><td>ಮರಳನ್ನು ಒದಗಿಸಲು ಯಾವ ಯಾವ ಸ್ಥಳಗಳನ್ನು ಗುರುತಿಸಲಾಗಿದೆ; ಯಾರಿಗೆ ಗುತ್ತಿಗೆ ನೀಡಲಾಗಿದೆ; ಗುತ್ತಿಗೆಗೆ ನಿಗದಿಗೊಳಿಸಿರುವ ದರವೆಷ್ಟು; (ಸಂಪೂರ್ಣ ವಿವರ ನೀಡುವುದು)</td><td>

- ಆಳಂದ ತಾಲ್ಲೂಕಿನಲ್ಲಿ ಮರಳು ನಿಕ್ಷೇಪಗಳು ಲಭ್ಯವಿಲ್ಲದ ಕಾರಣ ಯಾವುದೇ ಮರಳು ಬ್ಲಾಕ್‌ಗಳನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸದರಿ ಪ್ರದೇಶದಲ್ಲಿ ಮರಳು ಗುತ್ತಿಗೆಗೆ ಮಂಜೂರಾತಿ ನೀಡಿರುವುದಿಲ್ಲ.
</td></tr>
<tr><td>ಇ)</td><td>ಸಾರ್ವಜನಿಕ ಮರಳನ್ನು ಪಡೆಯಲು ಸರ್ಕಾರ ನಿಗದಿಪಡಿಸಿರುವ ದರವೆಷ್ಟು? (ವಿವರ ನೀಡುವುದು)</td><td>

- ಕಲಬುರಗಿ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮರಳನ್ನು ನೀಡಲು ಲೋಕೋಪಯೋಗಿ ಇಲಾಖೆಯ ಎಸ್.ಆರ್ ದರದನ್ವಯ ಪ್ರತಿ ಮೆಟ್ರಿಕ್ ಟನ್‌ಗೆ ರೂ.756/- ಗಳಂತೆ ಜಿಲ್ಲಾ ಮರಳು ಸಮಿತಿ ಸಭೆಯಲ್ಲಿ ನಿಗದಿಪಡಿಸಲಾಗಿರುತ್ತದೆ.
</td></tr>
</table>

ಸಂಖ್ಯೆ: ಸಿಐ 50 ಎಂಎಂಎನ್ 2019

(ರಾಜಶೇಖರ ಬಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	751
ಸದಸ್ಯರ ಹೆಸರು	:	**ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು)**
ಉತ್ತರಿಸುವ ದಿನಾಂಕ	:	12.02.2019
ಉತ್ತರಿಸುವ ಸಚಿವರು	:	**ಮುಖ್ಯಮಂತ್ರಿ**

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಮೇಲ್ವಿಚಾರಕರಿಗೆ ಕನಿಷ್ಟ ವೇತನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವ್ಯಾಪ್ತಿಯಲ್ಲಿ 5766 ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನಗಳಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿದ್ದು, ಸದರಿ ಗ್ರಂಥಾಲಯಗಳನ್ನು ಮೇಲ್ವಿಚಾರಣೆ ಮಾಡಲು ಗೌರವ ಸಂಭಾವನೆ ಆಧಾರದ ಮೇಲೆ ಮೇಲ್ವಿಚಾರಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಇದು ಗ್ರಾಮೀಣ ಪ್ರದೇಶಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮೇಲ್ವಿಚಾರಕರ ಕೆಲಸದ ನಿರ್ವಹಣೆಯ ಜವಾಬ್ದಾರಿಗನುಗುಣವಾಗಿ ನೀಡಲಾಗಿರುವ ಒಂದು ಗೌರವ ಸಂಭಾವನೆಯಾಗಿದ್ದು, ಇವರುಗಳು ಪೂರ್ಣಕಾಲಿಕ ನೌಕರರ ವ್ಯಾಪ್ತಿಗೆ ಬರುವುದಿಲ್ಲ. ಅಲ್ಲದೇ, ಇವರುಗಳನ್ನು ಕಾರ್ಮಿಕರೆಂದು ಪರಿಗಣಿಸುವುದು ಸೂಕ್ತವಾಗಿರುವುದಿಲ್ಲವೆಂಬ ಅಂಶವನ್ನು ಕಾರ್ಮಿಕ ಇಲಾಖಾ ಪತ್ರ ಸಂಖ್ಯೆ: ಕಾಇ 212 ಎಲ್‌ಡಬ್ಲ್ಯೂಎ 2013, ದಿನಾಂಕ : 18-12-2013 ರಲ್ಲಿ ತಿಳಿಸಿರುತ್ತಾರೆ. ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರ ಸ್ಥಾನಗಳು ಮಂಜೂರಾದ ಹುದ್ದೆಗಳಾಗಿರುವುದಿಲ್ಲ ಹಾಗೂ ಮಂಜೂರಾದ ಹುದ್ದೆಗಳ ಎದುರಿಗೆ ಕಾರ್ಯನಿರ್ವಹಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕನಿಷ್ಟ ವೇತನದ ವ್ಯಾಪ್ತಿಗೆ ಇವರು ಬರುವುದಿಲ್ಲ. ಈ ಸಂಬಂಧ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ : 28-01-2019 ರಂದು ಸಭೆ ನಡೆದಿದ್ದು, ಸದರಿ ಸಭೆಯಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಕೆಲಸ ವೇಳೆಯನ್ನು ದಿನದ 04 ಗಂಟೆಗಳ ಬದಲಾಗಿ 08 ಗಂಟೆಗಳ ಕಾರ್ಯಾವಧಿಗೆ ಹೆಚ್ಚಿಸುವ ಬಗ್ಗೆ ಸಾಧಕ ಬಾಧಕಗಳನ್ನು ನಿಯಮಾನುಸಾರ ಪರಿಶೀಲಿಸಲಾಗುವುದೆಂದು ತೀರ್ಮಾನಿಸಲಾಗಿದೆ.
ಆ)	ಈ ಗ್ರಂಥಾಲಯ ಮೇಲ್ವಿಚಾರಕರ ಸೇವೆಯನ್ನು ಖಾಯಂಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?	

ಸಂಖ್ಯೆ: ಇಡಿ 23 ಎಲ್‌ಬಿಬಿ 2019

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ		566
ಸದಸ್ಯರ ಹೆಸರು		ಶ್ರೀ ವೆಂಕಟರಮಣಯ್ಯ. ಓ (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ		12.02.2019
ಉತ್ತರಿಸಬೇಕಾದ ಸಚಿವರು		ಮಾನ್ಯ ಉನ್ನತ ಶಿಕ್ಷಣ ಸಚಿವರು
ಪ್ರಶ್ನೆ		ಉತ್ತರ
1	ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ಸ್ನಾತಕೋತ್ತರ ಪದವಿ ಕಾಲೇಜಿಗೆ ಗ್ರಂಥಾಲಯ, ಹೈ-ಟೆಕ್ ಶೌಚಾಲಯ ನಿರ್ಮಾಣ ಕೈಗೊಳ್ಳಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ.
2	ಹಾಗಿದ್ದಲ್ಲಿ, ಈ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿರುವ ಸ್ನಾತಕೋತ್ತರ ಪದವಿ ಕಾಲೇಜಿಗೆ 2014-15ನೇ ಸಾಲಿನಲ್ಲಿ ಹೆಚ್ಚುವರಿ ತರಗತಿ ಕೊಠಡಿಗಾಗಿ ರೂ. 60.00 ಲಕ್ಷ ಅನುದಾನ ಮಂಜೂರಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ. 2015-16 ನೇ ಸಾಲಿನಲ್ಲಿ ಹೆಚ್ಚುವರಿ ಕೊಠಡಿಗಾಗಿ ರೂ. 85.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಅದಲ್ಲದೆ 2018-19ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳಾಗಿ ಒಟ್ಟು ರೂ. 155.00 ಲಕ್ಷಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. 1. ಹೆಚ್ಚುವರಿ ತರಗತಿ ಕೊಠಡಿ ನಿರ್ಮಾಣಕ್ಕಾಗಿ – ರೂ. 125.00 ಲಕ್ಷಗಳು 2. ಶೌಚಾಲಯ ನಿರ್ಮಾಣಕ್ಕಾಗಿ- ರೂ. 30.00 ಲಕ್ಷಗಳು 3. ಪೀಠೋಪಕರಣಕ್ಕಾಗಿ – ರೂ. 1.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 4. ಪುಸ್ತಕ ಖರೀದಿಗಾಗಿ – ರೂ. 1.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 24 ಹೆಚ್‌ಪಿಯು 2019

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	581
2)	ಸದಸ್ಯರ ಹೆಸರು	:	ಶ್ರೀ ಬಸನಗೌಡ ದದ್ದಲ್
3)	ಉತ್ತರಿಸಬೇಕಾದ ದಿನಾಂಕ	:	12.02.2019
4)	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ರಾಯಚೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಎಷ್ಟು ಎಕರೆ ಭೂಮಿಯನ್ನು ಯಾವ ಸ್ಥಳದಲ್ಲಿ ಇದುವರೆಗೆ ಸ್ವಾಧೀನಪಡಿಸಿಕೊಳ್ಳಲಾಗಿದೆ; (ಮಾಹಿತಿ ಒದಗಿಸುವುದು)	ರಾಯಚೂರು ಜಿಲ್ಲೆಯ ಯರಮರಸ್ ಗ್ರಾಮದ ಸಮೀಪ ಏರ್‌ಸ್ಟ್ರಿಪ್ ನಿರ್ಮಾಣ ಮಾಡುವ ಸಲುವಾಗಿ 400 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.
ಆ)	ರಾಯಚೂರಿನಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು; (ಮಾಹಿತಿ ಒದಗಿಸುವುದು)	ವಿಮಾನ ಮಾರ್ಗದಲ್ಲಿ ಚಿಮಣಿಗಳು ಮತ್ತು ಹೈ ಟೆನ್‌ಷನ್ ವಿದ್ಯುತ್ ತಂತಿಗಳು ಇರುವುದರಿಂದ ವಿಮಾನ ನಿಲ್ದಾಣಕ್ಕಾಗಿ ಗುರುತಿಸಲ್ಪಟ್ಟ ಜಮೀನಿನಲ್ಲಿ ವಿಮಾನ ನಿಲ್ದಾಣ ಕಾರ್ಯ ಸಾಧ್ಯವಿರುವುದಿಲ್ಲ. ಪ್ರಸ್ತುತ, ಈ ಉದ್ದೇಶಕ್ಕಾಗಿ ಯಾವುದೇ ಪರ್ಯಾಯ ಭೂಮಿಯನ್ನು ಗುರುತಿಸಲಾಗಿಲ್ಲ.
ಇ)	ಹೈದ್ರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಮೂಲಸೌಲಭ್ಯಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;	RCS ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳ ವಿಮಾನ ನಿಲ್ದಾಣಕ್ಕೆ ಸಂಪರ್ಕ ರಸ್ತೆ, ಒಳಚರಂಡಿ ಕಾಮಗಾರಿಗಳಿಗೆ ಅನುದಾನ ನೀಡಲಾಗುವುದು ಮತ್ತು ವಿದ್ಯುತ್ ಹಾಗೂ ನೀರು ಸರಬರಾಜು ವೆಚ್ಚಗಳಿಗೆ ರಿಯಾಯಿತಿ ದರವನ್ನು ಮಾತ್ರ ರಾಜ್ಯ ಸರ್ಕಾರದ ವತಿಯಿಂದ ವಿಧಿಸಲಾಗುವುದು. ಕೇಂದ್ರ ರೈಲ್ವೆ ಮಂತ್ರಾಲಯದೊಂದಿಗೆ ವೆಚ್ಚ ಹಂಚಿಕೆ ಆಧಾರದ ಮೇಲೆ ಹೈದ್ರಾಬಾದ್ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿ ಬರುವ ರೈಲು ಮಾರ್ಗ ಮತ್ತು ರಸ್ತೆ ಮೇಲು/ಕೆಳ ಸೇತುವೆ ನಿರ್ಮಾಣ ಮಾಡಲು ಕೈಗೆತ್ತಿಕೊಳ್ಳಲಾದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

		ಹೈದ್ರಾಬಾದ್-ಕರ್ನಾಟಕ ವಲಯದಲ್ಲಿರುವ ಕಲಬುರಗಿ ವಿಮಾನ ನಿಲ್ದಾಣದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ ಹಾಗೂ ಬೀದರ್ ವಿಮಾನ ನಿಲ್ದಾಣದ ಟರ್ಮಿನಲ್ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.
ಈ)	ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಕಚೇರಿಯನ್ನು ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ಪ್ರಾರಂಭಿಸುವ ವಿಚಾರವಿದೆಯೇ?	ಇಲ್ಲ. ಆದಾಗ್ಯೂ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಅಧೀನದ ಕೆ.ಎಸ್.ಐ.ಐ.ಡಿ.ಸಿ ಕಛೇರಿಯು ಕಲಬುರಗಿಯಲ್ಲಿದೆ.

ಸಂಖ್ಯೆ: ಮೂಅಇ 15 ರಾಅವಿ 2019

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ